ಕರ್ನಾಟಕ ಸರ್ಕಾರ

ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ

ಸಂಖ್ಯೆ:ಬಿಟಿಇ 02 ಇಪಿಎಸ್ 2022.

ಆಯುಕ್ತರವರ ಕಛೇರಿ,
ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ,
ಅರಮನೆ ರಸ್ತೆ, ಬೆಂಗಳೂರು-560 001.
ದೂ. ಸಂ: 080 22200777
E-mail: dte.commissioner@gmail.com

ದಿನಾಂಕ: 11-03-2022

## ಸುತ್ತೋಲೆ

ವಿಷಯ: 2022ರ ಮಾರ್ಚ್/ಏಪ್ರಿಲ್ ಡಿಪ್ಲೋಮಾ ಸೆಮಿಸ್ಟರ್ ಪರೀಕ್ಷಾ ಕೇಂದ್ರಗಳನ್ನು ನಿಗಧಿಪಡಿಸುವ [ಕೆಲವೊಂದು ಪಾಲಿಟೆಕ್ನಿಕ್‌ಗಳನ್ನು ಇತರೆ ಪಾಲಿಟೆಕ್ನಿಕ್‌ಗಳಿಗೆ ಜೋಡಿಸುವುದು] ಕುರಿತು.

ಉಲ್ಲೇಖ: ಈ ಕಛೇರಿ ಸುತ್ತೋಲೆ ಸಂಖ್ಯೆ: ಬಿಟಿಇ 02 ಇಪಿಎಸ್ 2022, ದಿನಾಂಕ: 03.03.2022.

*-*-*-*

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಆಡಳಿತಾತ್ಮಕ ಹಿತದೃಷ್ಟಿಯಿಂದ ಉಲ್ಲೇಖದ ಈ ಕಛೇರಿಯ ಸುತ್ತೋಲೆಯನ್ನು ಮುಂದುವರೆಸುತ್ತಾ, ಈ ಕೆಳಗೆ ಕಾಲಂ(2)ರಲ್ಲಿ ಕಾಣಿಸಿರುವ ಪಾಲಿಟೆಕ್ನಿಕ್‌ಗಳು : 2022ರ ಮಾರ್ಚ್/ಏಪ್ರಿಲ್ ಡಿಪ್ಲೋಮಾ ಸೆಮಿಸ್ಟರ್ ಥಿಯರಿ ಪರೀಕ್ಷಾ ಕೇಂದ್ರಗಳಾಗಿ ಕಾರ್ಯನಿರ್ವಹಿಸುವುದಿಲ್ಲವಾದ್ದರಿಂದ, ಸದರಿ ಸಂಸ್ಥೆಗಳಲ್ಲಿ ನೋಂದಾಯಿಸಿರುವ ವಿದ್ಯಾರ್ಥಿಗಳಿಗೆ ಕಾಲಂ(3)ರಲ್ಲಿ ಸೂಚಿಸಿರುವ ಪಾಲಿಟೆಕ್ನಿಕ್‌ಗಳಲ್ಲಿ ಥಿಯರಿ ಪರೀಕ್ಷೆಗಳನ್ನು ಬರೆಯಲು ವ್ಯವಸ್ಥೆ ಮಾಡಲಾಗಿದೆ. ಈ ವಿಷಯವನ್ನು ತಮ್ಮ ಸಂಸ್ಥೆಯ ಎಲ್ಲಾ ವಿದ್ಯಾರ್ಥಿಗಳ ಗಮನಕ್ಕೆ ತರಲು ಸಂಬಂಧಪಟ್ಟ ಪಾಲಿಟೆಕ್ನಿಕ್ ಪ್ರಿನ್ಸಿಪಾಲರುಗಳಿಗೆ ತಿಳಿಸಲಾಗಿದೆ. ಥಿಯರಿ ಪರೀಕ್ಷೆಗಳು ದಿನಾಂಕ:28-03-2022 ರಿಂದ ಪ್ರಾರಂಭವಾಗುವುವು.

| ಕ್ರ. ಸಂ. | ಪಾಲಿಟೆಕ್ನಿಕ್ ಹೆಸರು ಮತ್ತು ಸ್ಥಳ | ಪರೀಕ್ಷಾ ಕೇಂದ್ರದ ಪಾಲಿಟೆಕ್ನಿಕ್‌ನ ಹೆಸರು ಮತ್ತು ಸ್ಥಳ |
|---|---|---|
| (1) | (2) | (3) |
| 01 | 367 ಶ್ರೀ ವೆಂಕಟರಾಜು ಇನ್ಸಿಟಿಟ್ಯೂಟ್ ಆಫ್ ಟೆಕ್ನಾಲಜಿ(ಪಾಲಿಟೆಕ್ನಿಕ್), ಬೆಂಗಳೂರು | 400 ಆಕ್ಸ್ ಫರ್ಡ್ ಪಾಲಿಟೆಕ್ನಿಕ್, ಬೆಂಗಳೂರು |
| 02 | 366 ಎಂ.ವಿ.ಜೆ ಪಾಲಿಟೆಕ್ನಿಕ್, ಬೆಂಗಳೂರು | 175 ಸರ್ಕಾರಿ ಪಾಲಿಟೆಕ್ನಿಕ್, ಇಮ್ಮಡಿಹಳ್ಳಿ |
| 03 | 444 ಶ್ರೀಮತ್ ಪಾಲಿಟೆಕ್ನಿಕ್, ಮೈಸೂರು | 418 ಜೆ.ಎಸ್.ಎಸ್ ಪಾಲಿಟೆಕ್ನಿಕ್, ಮೈಸೂರು |
| 04 | 516 ವಿಜಯಲಕ್ಷ್ಮಿ ಪಾಲಿಟೆಕ್ನಿಕ್, ಕೆ.ಜಿ.ಎಫ್, ಕೋಲಾರ | 131 ಸ್ಕೂಲ್ ಆಫ್ ಮೈನ್ಸ್, ಕೆ.ಜಿ.ಎಫ್ |

ಕಾಲಂ(2)ರಲ್ಲಿ ಸೂಚಿಸಿರುವ ಪಾಲಿಟೆಕ್ನಿಕ್‌ಗಳ ಪ್ರಿನ್ಸಿಪಾಲರು ತಮ್ಮ ಸಂಸ್ಥೆಯಲ್ಲಿ ನೋಂದಾಯಿಸಿರುವ ವಿದ್ಯಾರ್ಥಿಗಳ ಸಂಬಂಧಪಟ್ಟ ಪರೀಕ್ಷಾ ದಾಖಲೆಗಳನ್ನು (ಅಭ್ಯರ್ಥಿಪಟ್ಟಿ, ಮಾಸ್ಟರ್ ಅಟೆಂಡೆನ್ಸ್ ಲಿಸ್ಟ್ ಮೊದಲಾದ) ಹಾಗೂ ಸ್ಟೇಷನರಿ ಸಾಮಾಗ್ರಿಗಳನ್ನು ಪರೀಕ್ಷೆಗಳು ಪ್ರಾರಂಭವಾಗುವುದಕ್ಕೆ ಒಂದು ವಾರ ಮುಂಚಿತವಾಗಿ ಕಾಲಂ(3)ರಲ್ಲಿ ಸೂಚಿಸಿರುವ ಪಾಲಿಟೆಕ್ನಿಕ್ ಪ್ರಿನ್ಸಿಪಾಲರಿಗೆ ಮುಂದಿನ ಕ್ರಮಕ್ಕಾಗಿ ತಲುಪಿಸಬೇಕೆಂದು ಈ ಮೂಲಕ ಸೂಚಿಸಲಾಗಿದೆ.

ಕಾರ್ಯದರ್ಶಿ,
ಕಾಲೇಜು ಮತ್ತು ತಾಂತ್ರಿಕ ಪರೀಕ್ಷಾ ಮಂಡಳಿ,
ಬೆಂಗಳೂರು.

ಇವರಿಗೆ:

1. ಕಾಲಂ(2) ಮತ್ತು ಕಾಲಂ(3)ರಲ್ಲಿ ಸೂಚಿಸಿರುವ ಪಾಲಿಟೆಕ್ನಿಕ್‌ಗಳ ಪ್ರಿನ್ಸಿಪಾಲರುಗಳಿಗೆ ಮೇಲೆ ಸೂಚಿಸಿದ ಪಾಲಿಟೆಕ್ನಿಕ್‌ಗಳ ಆಯಾ ದಿನದ ಪರೀಕ್ಷೆಯ ಉತ್ತರ ಪತ್ರಿಕೆಗಳನ್ನು ಪ್ರತ್ಯೇಕ ಲಕೋಟೆಗಳಲ್ಲಿ ಕಳುಹಿಸಲು ಸೂಚಿಸಲಾಗಿದೆ.

ಪ್ರತಿ:

1. ಉಪನಿರ್ದೇಶಕರು(ಪರೀಕ್ಷೆ)
2. ಸಹಾಯಕ ನಿರ್ದೇಶಕರು(ಪರೀಕ್ಷೆ)/(ತಾಂತ್ರಿಕ)
3. ಸಂಬಂಧಪಟ್ಟ ಮುಖ್ಯ ವೀಕ್ಷಕರು/ಮುಖ್ಯ ಅಧೀಕ್ಷಕರುಗಳಿಗೆ.
4. ಸಂಬಂಧಪಟ್ಟ ತನಿಖಾದಳಗಳ ಮುಖಂಡರು.
5. ಇ.ಗವರ್ನೆನ್ಸ್- ವೆಬ್‌ಸೈಟ್‌ನಲ್ಲಿ ಪ್ರಕಟಿಸುವ ಸಲುವಾಗಿ.
6. ಇಬಿಎಲ್(2) ವಿಭಾಗಕ್ಕೆ.
7. ಇಸಿಎಸ್(1) (2) (3),
8. ಇಎಪಿ ವಿಭಾಗಕ್ಕೆ.
9. ಕಡತಕ್ಕೆ.